Bedding & Linen	50,000
Contingency	20,000
P.O.L.	35.000
Rs.	**7,82,908**

Non-recurring expenditure

Equipments & Apparatus. Rs. 3,00,000

The prosal to sanction of additional staff, requrring and non-recurring expenditure is under active consideration.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ: ಮಾನ್ಯ ಉಪಾಧ್ಯಕ್ಷರೇ ಈ ಕೆಳಕಂಡ ಸೂಚನೆಯನ್ನು ಪ್ರಸಕ್ತ ಅಧಿವೇಶನದಲ್ಲಿ ಪ್ರಸ್ತಾವಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ. 1990ನೇ....

ಶ್ರೀ ಆರ್. ವಿ. ದೇಶಪಾಂಡೆ: ಮಾನ್ಯ ಉಪಾಧ್ಯಕ್ಷರೇ ನನ್ನದೊಂದು ಕ್ರಿಯಾಲೋಪವಿದೆ. ಏನೆಂದರೆ ಇಲ್ಲಿ ಇದನ್ನು ಪರಿಶೀಲನೆ ಮಾಡುವಾಗ ಯಾರೊಬ್ಬರು ಮಂತ್ರಿಗಳು ಕೂಡಾ ಇಲ್ಲ.

SRI BLASIUS M D'SOUZA : I am just asking for the extension of time for the joint Select Committee on Hindu Succession Amendment Bill. This is not a Bill.

SRI R.V. DESHPANDE:Then it is okay.

ಹಿಂದೂ ಉತ್ತಾರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ

(ಜಂಟಿ ಪರಿಶೀಲನಾಸಮಿತಿ ಅವದಿ ವಿಸ್ತರಣೆಯ ಬಗ್ಗೆ ಪ್ರಸ್ತಾಪ)

ಶ್ರೀ ಬ್ಲೇಸಿಯಸ್ ಎಂ ಡಿಸೋಜ (ಕಾನೂನು ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ 1990ನೇ ಸಾಲಿನ ಹಿಂದೂ ಉತ್ತರಾಧಿಕಾರ ಕರ್ನಾಟಕ ತಿದ್ದುಪಡಿ ವಿಧೇಯದ ಬಗ್ಗೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಗೆ 92ನೇ ಮಾರ್ಚಿ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ. (ಪ್ರಸ್ತಾಪಕ್ಕೆ ಅಂಗೀಕಾರ ನೀಡಲಾಯಿತು).

ಉಪಾಧ್ಯಕ್ಷರು : ಈಗ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಬಿಲನ್ನು ಇಂಟ್ರಡ್ಯೂಸ್ ಮಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಈ ಬಗ್ಗೆ ನಮ್ಮದು ಪಾಯಿಂಟ್ ಆಫ್ ಆರ್ಡರ್ ಇದೆ. ಏಕೆಂದರೆ ಈ ಬಗ್ಗೆ ಸರ್ಕಾರಕ್ಕೆ ಯಾವುದೇ ತರಹದ ಸೀರಿಯಸ್‌ನಸ್ ಇಲ್ಲ. ಕಾವೇರಿಯ ಬಗ್ಗೆ ಬಿಲ್ ಆಗಲಿ ಲೋಕಾಯುಕ್ತದ ಬಗ್ಗೆ ಬಿಲ್ ಆಗಲೀ ಅವುಗಳನ್ನು ಇಂಟ್ರಡ್ಯೂಸ್ ಮಾಡುವಾಗ ಸಂಬಂಧಪಟ್ಟಂಥ ಒಬ್ಬರು ಮಂತ್ರಿಗಳೂ ಕೂಡಾ ಇಲ್ಲಿ ಇಲ್ಲ.

ಉಪಾಧ್ಯಕ್ಷರು : ಇದು ಬರೀ ಇಂಟ್ರಡ್ಯೂಸ್ ಮಾಡುವುದು ಅಷ್ಟೆ.

ಶ್ರೀ ಹೆಚ್. ಏಕಾಂತಯ್ಯ : ಇಲ್ಲಿ ನನ್ನದು ಕ್ರಿಯಾಲೋಪ ಇದೆ. ಅದೇನೆಂದರೆ ಯಾರು ಪ್ರಸ್ತಾವನೆಯನ್ನು ಮಂಡಿಸಬೇಕು ಎಂದು ಅವರ ಹೆಸರು ಇದೆ. ಅವರು ಇರಬೇಕು. ಬೇರೆ ಮಂತ್ರಿಗಳು ಅದನ್ನು ಇಡಲಿಕ್ಕೆ ಬರುವುದಿಲ್ಲ.

ಉಪಾಧ್ಯಕ್ಷರು : ಬರೀ ಇಂಟ್ರಡಕ್ಷನ್ ಅಷ್ಟೇ.

SRI H. EKANTHAIAH : No, Madam, I am sorry.

SRI D.B. CHANDREGOWDA : Even at the time of introduction the concerned minister should be there. The Law Minister....

ಶ್ರೀ ಆರ್.ವಿ. ದೇಶಪಾಂಡೆ : ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲ.

ಶ್ರೀ ಹೆಚ್. ವಿಶ್ವನಾಥಯ್ಯ : ಪಾರ್ಲಿಮೆಂಟ್‌ನಲ್ಲಿ ಕೂಡಾ ಕ್ಯಾಬಿನೆಟ್ ಮಂತ್ರಿಗಳು ಇಲ್ಲದೇ ಇದ್ದಾಗ ಡೆಪ್ಯೂಟಿ ಮಿನಿಸ್ಟರ್ ಅದನ್ನು ಇಂಟ್ರಡ್ಯೂಸ್ ಮಾಡಲಿಕ್ಕೆ ಅಧಿಕಾರ ಇಲ್ಲ ಎಂದು ರೂಲಿಂಗ್ ಇದೆ.

ಉಪಾಧ್ಯಕ್ಷರು: ಈಗ ಸಭೆಯನ್ನು ಅರ್ಧ ಗಂಟೆಗಳ ಕಾಲ ಮುಂದೂಡಲಾಗಿದೆ. ಮತ್ತೆ ಸಭೆಯು 2-30 ಗಂಟೆಗೆ ಮತ್ತು ಸಮಾವೇಶಗೊಳ್ಳುತ್ತದೆ.

(ಸಭೆಯು ಪುನಃ 3 ಗಂಟೆಗೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶಾಸನ ರಚನಾ ಕಾರ್ಯಕಲಾಪಗಳು

(ವಿಧೇಯಕವನ್ನು ಮಂಡಿಸುವುದು)

ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕ 1991

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಕೆ.ಜೆ. ಜಾರ್ಜ್: (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕ 1991 ಸಭೆಯ ಮುಂದೆ ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "1991ರ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗೊಳಿಸುವ ವಿಧೇಯಕವನ್ನು" ಮಂಡಿಸಲು ಅನುಮತಿ ನೀಡುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಕೆ.ಜೆ. ಜಾರ್ಜ್ : (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) ಮಾನ್ಯ ಉಪಾಧ್ಯಕ್ಷರೆ 1991 ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ 1991

ಪರ್ಯಾಲೋಚನ ಪ್ರಸ್ತಾವ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ 1991ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.